ದಿನಾಂಕಃ **12-06-2024**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ನನಗೆ ಓದು ಬರಹ ಬರುವುದಿಲ್ಲ ನಮ್ಮದು ವ್ಯವಸಾಯ ಕುಟುಂಬ ನಾನು ಎರಡನೇ ವಾದಿ ಅಣ್ಣ-ತಮ್ಮಂದಿರು ಎಂದರೆ ಸರಿ. ಇಬ್ಬರು ಒಟ್ಟಿಗೆ ವಾಸವಿದ್ದೇವೆ. ನಾವು ವ್ಯವಸಾಯ ಮಾಡುತ್ತಿರುವ ಆಸ್ತಿಗಳು ಪಿತಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಸ್ವತ್ತನ್ನು ನಮ್ಮ ತಂದೆ ಖರೀದಿ ಮಾಡಿದ್ದಾರೆ, ಯಾರಿಂದ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಖರೀದಿ ಮಾಡಿದ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಶಿರಾ ನ್ಯಾಯಾಲಯದಲ್ಲಿ ಸುಮಾರು 5-6 ಕೇಸುಗಳು ಇವೆ. ಅವುಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ಇದ್ದವು ಎಂದರೆ ಸರಿ . O.S 407/2013 ಅನ್ನು ತಿಪ್ಪೇಸ್ವಾಮಿ ಎಂಬುವವರ ವಿರುದ್ಧ ದಾಖಲು ಮಾಡಿದ್ದೆ ಎಂದರೆ ಸರಿ. ನನ್ನ ಹೆಂಡತಿ ಮಕ್ಕಳು ನನ್ನ ಮೇಲೆ ಕ್ರಿಮಿನಲ್ ಪ್ರಕರಣ ದಾಖಲುಮಾಡಿದ್ದರೆ ಎಂದರೆ ಸರಿ ಆದ್ದರಿಂದ ನನಗೆ ನ್ಯಾಯಾಲಯದ ಪ್ರಕರಣಗಳ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ಬ್ರಹ್ಮಸಂದ್ರ ಗ್ರಾಮದಲ್ಲಿ 150 ಮನೆಗಳಿವೆ ಎಂದರೆ ಸರಿ. ಅಲ್ಲಿ 1200 ರಿಂದ 1500 ಜನ ವಾಸಮಾಡುತ್ತಾರೆ ಎಂದರೆ ಸರಿ. ಊರಿನ ಜನರಿಗೆ ಒಂದಲ್ಲ ಒಂದು ಕೇಸು ಹಾಕಿ ತೊಂದರು ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಬ್ರಹ್ಮಸಂದ್ರ ಗ್ರಾಮದಲ್ಲಿ ಪ್ರತಿವಾದಿಯವರಿಗೆ ಒಂದು ಮನೆ ಇದೆ ಎಂದರೆ ಸರಿ. ಪ್ರತಿವಾದಿಗಳ ಮನೆ 15-16 ವರ್ಷಗಳ ಹಿಂದಿನ ಮನೆ ಎಂದರೆ ಸರಿ. ಅದಕ್ಕಿಂತ ಮೊದಲು ನಮಗೂ ಒಂದು ಮನೆ ಇತ್ತು ಎಂದು ಸಾಕ್ಷಿಯು ನುಡಿಯುತ್ತಾರೆ.

ನಾನು 2017 ನೇ ಸಾಲಿನಲ್ಲಿ ಪ್ರಸ್ತುತ ದಾವಾ ದಾಖಲಿಸಿದ್ದು ಪ್ರತಿವಾದಿಯರು ಒತ್ತುವರಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ . ದಾವಾ ಸ್ವತ್ತು ನನ್ನ ಮತ್ತು ಸಹೋದರರನ ಹೆಸರಿನಲ್ಲಿದೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ-3 ನನ್ನ ಹೆಸರಿನಲ್ಲಿದೆ ಎಂದರೆ ಸರಿ. ನನ್ನ ಸ್ವತ್ತು ಬೇವಿನಹಳ್ಳಿ ಪಂಚಾಯತಿಯ ವ್ಯಾಪ್ತಿಗೆ ಬರುತ್ತದೆ ಮನೆ ಕಟ್ಟಲು ಪಂಚಾಯತಿಯಿಂದ ಲೈಸೆನ್ಸ್ ಪಡೆದಿದ್ದೇನೆ ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ. ನಿಪಿ-1 ನನ್ನ ತಮ್ಮನ ಹೆಸರಿನಲ್ಲಿದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಮನೆ ಕಟ್ಟಲು ನನ್ನ ತಮ್ಮನ ಹೆಸರಿನಲ್ಲಿ ಲೈಸೆನ್ಸ್ ಪಡೆದಿದ್ದೆ ನನ್ನ ತಮ್ಮ ಹುಟ್ಟಿದಾಗಿನಿಂದಲೂ ಮಾನಸಿಕ ಅಸ್ವಸ್ಥ ಎಂದರೆ ಸರಿ. ಸಾಮಾನ್ಯವಾಗಿ ಮಾನಸಿಕ ಅಸ್ವಸ್ಥರಿಗೆ

ಯಾವುದೇ ಇಲಾಖೆಯಿಂದ ದಾಖಲೆಗಳನ್ನು ಕೊಡುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಖಾತೆ ನಂ. 45/48 ಪೂಪಃ 57 ಅಡಿ, ಉದಃ 28 ಅಡಿಗಳಿದೆ. ನಿಪಿ-1 ರಲ್ಲಿ ಖಾತೆ ನಂ. 45/1 ಎಂದು, ಅಳತೆ 22X18 ಎಂದು ಬರೆಯಲಾಗಿದೆ ಎಂದರೆ ಸರಿ. ಆದ್ದರಿಂದ ದಾವಾ ಸ್ವತ್ತು ಮತ್ತು ನಿಪಿ-1 ರಲ್ಲಿ ನಮೂದಾಗಿರುವ ಸ್ವತ್ತಿಗೆ ತಾಳೆಯಾಗುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ರಂಗಣ್ಣನ ಮನೆ ಇದೆ ವಾದಪತ್ರದ ಶೆಡ್ಯೂಲ್ ನಲ್ಲಿ ಸ್ವತ್ತಿನ ಪೂರ್ವಕ್ಕೆ ರಾಮಣ್ಣನ ಮನೆ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-1 ರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ. ನಿಪಿ-1 ರಲ್ಲಿ ಪೂರ್ವಕ್ಕೆ ನರಸಮ್ಮನ ಮನೆ ಎಂದು ಬರೆಯಾಲಗಿದೆ ಎಂದರೆ ಸರಿ. ದಾವಾ ಸ್ವತ್ತಿನ ಪೂಉಃ ದಾರಿ, ದಃ ರಾಜಣ್ಣನ ಮನೆ. ನಿಪಿ-1 ರಲ್ಲಿ ಸ್ವತ್ತಿನ ಪೂರ್ವಕ್ಕೆ ಕೆಂಚಮ್ಮನ ಮನೆ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-1 ರಲ್ಲಿ ಸ್ವತ್ತಿನ ಯಾವ ದಿಕ್ಕಿನಲ್ಲೂ ಪ್ರತಿವಾದಿಯ ಮನೆ ಬರುವುದಿಲ್ಲ ಎಂದು ಬರೆಯಲಾಗಿದೆ ಎಂದರೆ ಸರಿ. ದಾವಾ ಸ್ವತ್ತಿನ ದಕ್ಷಿಣಕ್ಕೆ ಪ್ರತಿವಾದಿ ತೊಂದರೆ ನೀಡುತ್ತಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಪತ್ರದ ಶೆಡ್ಯೂಲ್ ಮತ್ತು ನನ್ನ ದಾಖಲೆಗಳಲ್ಲಿರುವ ಚೆಕ್ಕು ಬಂದಿ ಬೇರೆ ಬೇರೆಯಾಗಿದ್ದು ಪ್ರತಿವಾದಿಗೆ ತೊಂದರೆ ನೀಡಲು ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ , ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ನನ್ನ ಪರವಾಗಿ ಆಗಿದ್ದ ಮಧ್ಯಂತರ ಆದೇಶ ವಜಾ ಆಗಿತ್ತು ಎಂದರೆ ಸರಿ. ಸದರಿ ಆದೇಶವನ್ನು ಪ್ರಶ್ನೆ ಮಾಡಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ M.A 20/2017 ನ್ನು ದಾಖಲಿಸಿದ್ದೆ ಎಂದರೆ ಸರಿ ಅದು ವಜಾ ಆಯಿತು ಎಂದರೆ ಸರಿ. ಸಾಕ್ಷಿಯು ಒಪ್ಪಿದ ಮೇರೆಗೆ ಸದರಿ ಆದೇಶದ ಪ್ರತಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿರುವ ಅಂಶಗಳು ನನಗೆ ಗೊತ್ತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.